## ಸಿವಿಲ್ ಜಡ್‌ಜ್ ಮತ್ತು ಜೆಎಂಎಫ್‌ಸಿಯವರ ನ್ಯಾಯಾಲಯ ಪೊನ್ನಂಪೇಟೆ

**ಕ್ರಿ.ಮೊ.ಸಂಖ್ಯೆ:1768/2022**

**ಪಿರ್ಯಾದಿ** : ಶ್ರೀ ಜೋಯಪ್ಪ ಕೆ.ಪಿ,
ತಂದೆಃ ಪೌತಿ ಪೂಣಚ್ಚ,
ವಾಸಃ ಬಾಳಾಜಿ ಗ್ರಾಮ ಮತ್ತು ಅಂಚೆ,
ಮಾಯಮುಡಿ, ಪೊನ್ನಂಪೇಟೆ ತಾಲ್ಲೂಕು ,
ಕೊಡಗು ಜಿಲ್ಲೆ.

**ವಿರುದ್ಧ**

**ಆರೋಪಿ** : ಶ್ರೀಮತಿ ಸಣ್ಣುವಂಡ ಭವ್ಯ ಸೋಮಣ್ಣ,
ಗಂಡಃ ಸಣ್ಣುವಂಡ ಸೋಮಣ್ಣ,
ವಾಸಃ ಮಾಯಮುಡಿ ಗ್ರಾಮ ಮತ್ತು ಅಂಚೆ,
ಪೊನ್ನಂಪೇಟೆ ತಾಲ್ಲೂಕು,
ಕೊಡಗು ಜಿಲ್ಲೆ.

## ದಂಡ ಸಂಹಿತೆ ಪ್ರಕ್ರಿಯೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ

**ಪ್ರಶ್ನೆ ಸಂಖ್ಯೆ-1:** ಪಿರ್ಯಾದಿಯ ಪರ ಇದುವರೆಗೂ ನುಡಿದ ಎಲ್ಲಾ ಸಾಕ್ಷ್ಯಗಳನ್ನು ಆಲಿಸಿದ್ದೀರಾ?

ಉಃ ಔದು

**ಪ್ರಶ್ನೆ ಸಂಖ್ಯೆ-2:** ಪ್ರಾ.ಸಾಃ1 ಶ್ರೀ ಜೋಯಪ್ಪ ಕೆ.ಪಿ, ಪಿರ್ಯಾದುದಾರರು, ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ಆರೋಪಿಯಾದ ನೀವು ಮತ್ತು ನಿಮ್ಮ ಹೆಂಡತಿ ಪರಿಚಯಸ್ಥರಾಗಿದ್ದು, ತಾವುಗಳು ಬಾರ್ ಅಂಡ್ ರೆಸ್ಟೋರೆಂಟ್ ವ್ಯವಹಾರವನ್ನು ಪ್ರಾರಂಭಿಸುವುದಕ್ಕಾಗಿ ಅವರ ಬಳಿ 2021ನೇ ಇಸವಿಯಲ್ಲಿ ವಿವಿಧ ದಿನಾಂಕಗಳಂದು ಒಟ್ಟು ರೂ.15,00,000/- ರೂಪಾಯಿಗಳನ್ನು ಸಾಲವಾಗಿ ಪಡೆದಿದ್ದು, ನಂತರ ಪಿರ್ಯಾದಿಯವರು ಹಣವನ್ನು ಮರುಪಾವತಿಸುವಂತೆ ಕೇಳಿದಾಗ ಆರೋಪಿಯಾದ ನೀವು ದಿಃ02.12.2021 ರ ಕಾರ್ಪೋರೇಷನ್ ಬ್ಯಾಂಕ್, ಹುದಿಕೇರಿ ಶಾಖೆಯ ನಿಮ್ಮ ಖಾತೆಯ 342096 ನಂಬರಿನ ಚೆಕ್ ಅನ್ನು ಸಾಲದ ಭಾಧ್ಯತೆಗಾಗಿ ನೀಡಿದ್ದು, ನಂತರ ಪಿರ್ಯಾದಿಯವರು ಸದರಿ ಚೆಕ್‌ನ ನಗದೀಕರಣಕ್ಕಾಗಿ ತಮ್ಮ ಬ್ಯಾಂಕ್ ಆದ ಕೆ.ಡಿ.ಸಿ.ಸಿ ಸೆಂಟ್ರಲ್ ಬ್ಯಾಂಕ್, ಗೋಣಿಕೊಪ್ಪ ಶಾಖೆಗೆ ಹಾಜರುಪಡಿಸಿದಾಗ, ಅವರು ದಿಃ06.12.2021 ರಂದು ಆರೋಪಿಯಾದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಹಿಂಬರಹವನ್ನು ನೀಡಿರುತ್ತಾರೆ. ನಂತರ ಪಿರ್ಯಾದಿಯವರು ತಮ್ಮ

ವಕೀಲರ ಮೂಲಕ ದಿಃ20.12.2021 ರಂದು 15 ದಿನಗಳೊಳಗೆ ಚೆಕ್ ನ ಹಣವನ್ನು ಹಿಂತಿರುಗಿಸುವಂತೆ ಕಾನೂನು ರೀತಿಯಲ್ಲಿ ನೋಟೀಸನ್ನು ನೀಡಿದ್ದರೂ ಸಹ ಆರೋಪಿಯಾದ ನೀವು ಚೆಕ್‌ನ ಹಣವನ್ನು ಹಿಂಡಿರುಗಿಸದೇ ಇರುವ ಕಾರಣ ಅವರು ನಿಮ್ಮ ವಿರುದ್ಧ ದೂರನ್ನು ನೀಡಿ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಮತ್ತು ಸಾಕ್ಷಿಯು ನಿ.ಪಿ.1 ಚೆಕ್ಕನ್ನು, ನಿ.ಪಿ.2 ಬ್ಯಾಂಕ್ ಹಿಂಬರಹವನ್ನು, ನಿ.ಪಿ.3 ವಕೀಲರ ಮೂಲಕ ನೀಡಿದ ನೋಟೀಸನ್ನು, ನಿ.ಪಿ.4 ಅಂಚೆ ರಸೀತಿಯನ್ನು, ನಿ.ಪಿ.5 ಅಂಚೆ ಸ್ವೀಕೃತಿಯನ್ನು, ನಿ.ಪಿ.6 ಬ್ಯಾಂಕ್ ಚಲನ್ ಅನ್ನು, ನಿ.ಪಿ.7 ರಿಂದ 9 ಮೂರು ಪಹಣಿಗಳನ್ನು, ನಿ.ಪಿ.10 ರಿಂದ 15 ಬ್ಯಾಂಕ್ ವೋಚರ್ ಗಳನ್ನು, ನಿ.ಪಿ.16 ಜಿ.ಪಿ.ಎ ಅನ್ನು ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ ಸುಳ್ಳು

<u>**ಪ್ರಶ್ನೆ ಸಂಖ್ಯೆ-3:**</u> ಈ ಪ್ರಕರಣದಲ್ಲಿ ನಿಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ಅಥವಾ ದಾಖಲಾತಿ ಹಾಜರುಪಡಿಸಲು ಬಯಸುವಿರಾ?

ಉತ್ತರಃ ಇಲ್ಲ

<u>**ಪ್ರಶ್ನೆ ಸಂಖ್ಯೆ-4**</u> ಈ ಪ್ರಕರಣದಲ್ಲಿ ನೀವೇನಾದರೂ ಹೇಳಬಯಸುವಿರಾ?

ಉತ್ತರಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ವಿವರಿಸಿದ ನಂತರ ಆತನು ನೀಡಿದ ಉತ್ತರಗಳನ್ನು ದಿಃ11.12.2025 ರಂದು ನನ್ನಿಂದ ದಾಖಲು ಮಾಡಿಕೊಳ್ಳಲಾಯಿತು)

ಸ್ಥಳಃ ಪೊನ್ನಂಪೇಟೆ,
ದಿನಾಂಕಃ 11.12.2025

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಪೊನ್ನಂಪೇಟೆ.

On perusal of records, the accused alleged to have committed offences P/U/Sec.138 of N.I Act. The above alleged offence against accused is bailable in nature and the same is triable by this court. Insufficient Funds and Dormant Account